ಮುರಿದ ಕನ್ನಡಿ ಚೂರು. ಗಾಜಿನ ಮೇಲೆ ಅಂಟಿದ್ದ ಕೊಳಚೆಯನ್ನು ಸವರಿ ಮುಖ ನೋಡಿಕೊಂಡ. ಚಿಗುರುತ್ತಿದ್ದ ಗಡ್ಡ ಕುರುಚಲು ಗುಂಡಿಯಂತೆ ಕಂಡಿತು. ನುಣುಪಾಗಿದ್ದ ತಲೆಕೂದಲು ಒರಟಾಗಿ ಕೆದರಿಕೊಂಡಿತ್ತು. ಕನ್ನಡಿ ಚೂರನ್ನು ಎಡಗೈಗೆ ಪಾಸ್ ಮಾಡಿ ಬಲಗೈಯಿಂದ ತಲೆಕೂದಲನ್ನು ಹಿಮ್ಮುಖವಾಗಿ ತೀಡಿಕೊಂಡ. ಗಡ್ಡದ ಕುರುಚಲು ಬೆಳೆಯ ಮೇಲೂ ನಿರಾಳದಲ್ಲಿ ಕೈಯಾಡಿಸಿದ. ಆದರೆ, ಕೈಗೆ ಅಂಟಿಕೊಂಡಿದ್ದ ಕಸದ ಕೊಚ್ಚೆರಸ ಗಡ್ಡಕ್ಕೂ, ತಲೆಕೂದಲಿಗೂ ಅಂಟಿಕೊಂಡಿತು. ಇದನ್ನು ನಿರೀಕ್ಷಿಸಿದವನಲ್ಲ. ಈಗ ಮೊದಲ ಬಾರಿಗೆ ಅಸಹ್ಯ ಅನಿಸಿತು. ಥೂ! ಹಾಳಾದ್ದೆ ಅಂತ ಬೈದುಕೊಂಡ. ಒಮ್ಮೊಮ್ಮೆ ಹಿಂದು ಮುಂದು ನೋಡೋದಿಲ್ಲ. ಹಾಳು ಅವಸರದಿಂದ ಯಡವಟ್ಟು...!

ಮಾದೇವ ಹಸ್ತಕ್ಕೆ ಅಂಟಿದ್ದ ಕೊಚ್ಚೆಯನ್ನು ಅಲ್ಲೇ ಬಿದ್ದಿದ್ದ ಪೇಪರಿನ ಚೂರಿಗೆ ಒರೆಸಿ ತರುವಾಯ ಅದೇ ಹಸ್ತದಿಂದ ಮೋರೆ ಮತ್ತು ತಲೆಕೂದಲಿನ ಮೇಲಿದ್ದ ಕಸವನ್ನು ಸಾಧ್ಯವಾದಷ್ಟು ಸವರಿ ಸರಿಪಡಿಸಿಕೊಂಡ.

ಮಾದೇವನಿಗೆ ಹಿಂಗೆ ಕರಗಿದ ಕಸ, ಆ ಕಸದಿಂದ ಉತ್ಪತ್ತಿಯಾದ ವಾಸನೆ ಈಗ ಯಾವುದೂ ವಾಕರಿಕೆ ಬರಿಸುತ್ತಿರಲಿಲ್ಲ. ಮೊದಮೊದಲಿಗೆ ರಸ್ತೆಯಂಚಿನ ಕಸದ ಕೊಚ್ಚೆಗುಡ್ಡೆಯನ್ನು ಬಗೆಬಗೆದು ಬಾಂಡಲಿಯಲ್ಲಿ ತುಂಬಿ ಆಟೋಗೆ ಎಸೆಯುವಾಗ, ಎಸೆದ ಮೇಲೆ ಹರಡುತ್ತಿದ್ದ ಅದರ ಗಬ್ಬು ವಾಸನೆಯಿಂದ, ಆಮೇಲೆ ಅದೇ ಕಸದ ಆಟೋದೊಳಗೆ ಕೂತು ಮೈದಾನಕ್ಕೆ ತಲುಪುವಗಂಟ ಮೂಗು ಉರಿ ಬಂದು, ವಾಂತಿ ಬರುವಂತಾಗುತ್ತಿತ್ತು. ಜೊತೆಗೆ ಈ ವೇಷ ಕಂಡರೆ ಅವ್ವ ಎಷ್ಟು ಸಂಕಟ ಪಡುವಳೋ ಎಂಬ ಒಳಯಾತನೆ ಬೇರೆ. ಈ ವಾಸನೆ ಆ ಯಾತನಾಮಯ ನೆನಪುಗಳ ಹಿಜಾಪಿನಲ್ಲಿ ಈ ಚಾಕರಿಯನ್ನು ಆರಂಭದ ಎರಡ್ಮೂರು ವಾರ ಸೈಸುವುದೇ ಹರಂಕಷ್ಟವಾಗಿ ಬಿಟ್ಟಿತ್ತು. ಇದು ಯಾವ ಜಲ್ಮದ ಪಾಪ ಅಂತ ಆಗಾಗ ಶಪಿಸಿಕೊಂಡಿದ್ದೂ ಉಂಟು. ದಿಟ ಅಂದರೆ ಹಣದ ದರ್ದು ಎಲ್ಲವನ್ನೂ ತಾಳುವಂತೆ ಮಾಡಿಬಿಟ್ಟಿತ್ತು. ಒಮ್ಮೆ ತಾಳೆ ಹಾಕಿದರೆ ಮರಿದ್ಯಾವೇಗೌಡರ ತಿಪ್ಪೆಗುಂಡಿ ಇಂಥ ಅಸಹ್ಯ ಹುಟ್ಟಿಸುತ್ತಿರಲಿಲ್ಲ. ಆ ನಚ್ಚಿಕೆಯಿಂದಲೇ ಈ ಕಾಯಕಕ್ಕೆ ಒಪ್ಪಿಕೊಂಡಿದ್ದು.

ಮಾದೇವ ಕಾಲುಗಳನ್ನು ಇನ್ನಷ್ಟು ಕೆಳಗೆ ಚಾಚಿ ದೂರಿಯಾಡಿಸತೊಡಗಿದ: ಊರು ಮುಂದಾರವೇ ಬಾಯಿ ತೆರೆದು ಕೂತಿದ್ದ ಆ ತಿಪ್ಪೆಗುಂಡಿಗೆ ಗೌಡರ ಹಟ್ಟಿಯ ದನ, ಕುರಿ, ಎಮ್ಮೆ, ಕೋಳಿ, ಕೊಕ್ಕ, ಚೌರದ ಕೂದಲು, ಮಂದಿ ಮತ್ತು ರಾಸುಗಳು ತಿಂದು ಮಿಕ್ಕಿದ ತಂಗಳು- ಒಟ್ಟನಲ್ಲಿ ಸಕಲ ಸಾಮಗ್ರಿಯ ಜೊತೆಗೆ ಮಳೆ ಬಂದಾಗ ಊರು ಬೀದಿಯ ಕಡ್ಡಿಕಸ ತೊಪ್ಪೆ ಮುಸುರೆಯೆಲ್ಲ ಬಂದು ನುಗ್ಗಿ ಸದಾ ಭರ್ತಿಯಾಗಿರುತ್ತಿತ್ತು.

ಹದಗೊಂಡ ತಿಪ್ಪೆಗೊಬ್ಬರವನ್ನು ಮುಂಗಾರು ಮಳೆ ಬೀಳುವ ಮುನ್ನವೇ ಗೌಡರು ಟ್ರ್ಯಾಕ್ಟರಿನಲ್ಲಿ ತುಂಬಿ ತಮ್ಮ ತೋಟ, ಹೊಲಗಳಿಗೆ ಸುರಿಸುತ್ತಿದ್ದರು. ಆ ತಿಪ್ಪೆಕಸವನ್ನು ಬಗೆಯುತ್ತಿದ್ದರೆ ಹಿತವಾದ ತೆಳುಹೊಗೆ ಮೇಲೇಳುತ್ತಿತ್ತು. ಕಮ್ಮನೆ ವಾಸನೆ ಹರಡುತ್ತಿತ್ತು. ಬೆಚ್ಚನೆ ಹಬೆ ತುಂಬುತ್ತಿತ್ತು. ದೀಪಾವಳಿ ದಿನ ಗೌಡರ ತಮ್ಮಂದಿರು ತಿಪ್ಪೆಗೆ ಪೂಜೆ ಸಲ್ಲಿಸುತ್ತಿದ್ದರು. ಅವ್ವ ತಿಪ್ಪೆಗುಂಡಿ ಲಕುಸುಮಿ ಅನ್ನುತ್ತಿದ್ದಳು.

ಮಾದೇವನಿಗೆ ಅವ್ವನ ಸ್ಮರಣೆ ಮತ್ತೆ ಮುನ್ನೆಲೆಗೆ ಬಂತು. ಇರುಳು ಪೂರ್ತಿ ಬರೀ ಮಂಪರು. ತಾನು ಹಣ ಕೂಡಿಸಿಕೊಂಡು ಬರಲು ನಗರಕ್ಕೆ ಹೋಗುತ್ತೇನೆಂದು ಗೊತ್ತಾದಾಗ, 'ಬ್ಯಾಡಕನಪ್ಪ ಅಂತ... ನಿಂಗೆ ಅಲ್ಲಿ ಆಗಲಿಲ್ಲಾಂದರೆ ಬಂದುಬುಡು ಅಂತ... ಈ ಹಾಳು ಹೊಟ್ಟೆನೋವು ನನ್ನ ತಕೊಂಡು ಹೋಗಾಕೆ ಬಂದದೆ ಅಂತ...' ಅವಳದೇ ಮಾತು. ಅವಳದೇ ಗ್ಯಾನ. ಅವಳದೇ ಚಿತ್ರ.

ಮಾದೇವ ಕೂಲಿ ಹಣವನ್ನು ಈಸಿಕೊಂಡು ಹೋಗಿ ಅವ್ವನ ಕಾಯಿಲೆಯನ್ನು ವಾಸಿ ಮಾಡಬೇಕೆಂದು ಅಂದುಕೊಂಡ ಲೆಕ್ಕಾಚಾರವನ್ನು ಮತ್ತೊಮ್ಮೆ ದೃಢ ಮಾಡಿಕೊಂಡ. ಇವತ್ತು ನಮ್ಮ ಆಟೋದಿಂದ ದೊಡ್ಡ ಲಾರಿಗೆ ಕಸ ತುಂಬುವ ಕೆಲಸ ಮಾತ್ರ ಬಾಕಿ ಇತ್ತು. ಆದರೆ ಲಾರಿ ಆಳುಗಳು ಕಮ್ಮಿ ಬಂದಿದ್ದರೆ ಡಂಪಿಂಗ್ ಯಾರ್ಡಿಗೆ ನಾವೇ ಹೋಗಿ ಖಾಲಿ ಮಾಡಬೇಕಾಗಿ ಬಂದರೆ ಆಗ ತಡವಾಗಬಹುದು. ಇವತ್ತು ಹಂಗೆ ಆಗದಿರಲಿ ಅಂದುಕೊಂಡ. ಮೂರು ತಿಂಗಳಿನಿಂದ ಇದೇ ರಿಂಗ್ ರೋಡ್... ಇದೇ ಆಟೋ... ದುಪ್ಪಟ್ಟಾಗುತ್ತಿರುವ ಕಸ... ಅರಚುವ ವಾಹನಗಳು...